(ದಿನಾಂಕ **29-12-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಫಿರ್ಯಾದಿಯ ಪ್ರಮಾಣೀಕೃತ ಹೇಳಿಕೆ**

ನಾನು ಈ ಪ್ರಕರಣದಲ್ಲಿ ಫಿರ್ಯಾದಿದಾರನಾಗಿದ್ದು, ನನ್ನ ಪ್ರಮಾಣೀಕೃತ ಹೇಳಿಕೆಯ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ. ನಾನು ನನ್ನ ಫಿರ್ಯಾದಿಯ ಜೊತೆ ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ.

ಆರೋಪಿಯು ನೀಡಿರುವ ಚೆಕ್‌ನ್ನು ನಿ.ಪಿ.1 ಎಂದು, ಅದರಲ್ಲಿರುವ ಆರೋಪಿಯ ಸಹಿಯನ್ನು ನಿ.ಪಿ.1(ಎ) ಎಂದು, ಬ್ಯಾಂಕನವರು ನೀಡಿರುವ ಹಿಂಬರಹವನ್ನು ನಿ.ಪಿ.2 ಎಂದು, ದಿನಾಂಕ 18-06-2025 ರಂದು ಆರೋಪಿಗೆ ನೀಡಿರುವ ನೋಟಿಸ್‌ನ ಕಚೇರಿ ಪ್ರತಿಯನ್ನು ನಿ.ಪಿ.3 ಎಂದು, ಆರೋಪಿಗೆ ನೋಟಿಸ್ ನೀಡಿದ ಬಗ್ಗೆ ಅಂಚೆ ರಶೀದಿಯನ್ನು ನಿ.ಪಿ.4 ಎಂದು, ಆರೋಪಿತಳು ದಿನಾಂಕಃ 03/07/2025 ರಂದು ತನ್ನ ವಕೀಲರ ಮೂಲಕ ನಿಪಿ 3 ಕ್ಕೆ ನೀಡಿದ ಉತ್ತರವನ್ನು ನಿಪಿ5 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಫಿರ್ಯಾದಿಯ ಪ್ರಮಾಣೀಕೃತ ಹೇಳಿಕೆಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹೆಚ್ಚುವರಿ ಜೆ.ಎಂ.ಎಫ್.ಸಿ. ಕುಮಟಾ**